ಎನ್ನುವ ಕಿಣ್ವವನ್ನು ಇಲಿಯ ಯಕೃತ್ತಿನಿಂದ ಪ್ರತ್ಯೇಕಿಸಿ ಮೊದಲ ಬಾರಿಗೆ ಶುದ್ಧೀಕರಿಸಿ ಇದರ ಆಕ್ಟಿವಿಟಿಯನ್ನು ಅಳೆಯುವ ವಿಧಾನವನ್ನೂ ಕಂಡು ಹಿಡಿದೆ. 'ಬಯೋಕೆಮಿಕ ಬಯೋಫಿಸಿಕ ಆಕ್ಟ' ಹಾಗೂ 'ಎನಲಿಟಿಕಲ್ ಬಯೋಕೆಮಿಸ್ಟ್ರಿ' ಎನ್ನುವ ಪ್ರತಿಷ್ಠಿತ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿ ಈ ಕುರಿತು ಎರಡು ಪ್ರಬಂಧಗಳು ಪ್ರಕಟವಾದವು. ಆ ಬಳಿಕ ಕೆಥೆಪ್ಸಿನ್ ಬಿ2, ನಿಂಜೂರ್ ಎಟ್ ಆಲ್ (Ninjoor et al) ಎಂಜೈಮ್ ಎಂದು ಕರೆಯಲ್ಪಟ್ಟಿತು. ಈಗ ಈ ಕಿಣ್ವದ ಬೇರೆ ಬೇರೆ ಕಾರ್ಯ ಚಟುವಟಿಕೆಗಳು ಪ್ರಕಟವಾಗಿವೆ. ಹೀಗಾಗಿ ಇದಕ್ಕೆ ನಿಂಜೂರ್ ಕಿಣ್ವ ಎನ್ನುವುದು ಸಮಂಜಸವಲ್ಲ. ಈ ಸಂಶೋಧನೆಯ ಕೀರ್ತಿ ಡಾ. ಟ್ಯಾಪೆಲ್‌ಗೂ ಸಲ್ಲುತ್ತದೆ.

ಅಮೆರಿಕದ ರಾಕೆಫೆಲರ್ ಯುನಿವರ್ಸಿಟಿಯಲ್ಲಿ ಪ್ರೊಫೆಸರರಾಗಿದ್ದು ಲೈಸೋಸೋಮ್‌ಗಳನ್ನು ಕಂಡುಹಿಡಿದ ನೊಬೆಲ್ ಪುರಸ್ಕೃತ ಡಾ. ಬೆಲ್ಜಿಯನ್ ದ ದುವ್ ಅವರನ್ನು ಭೇಟಿ ಮಾಡಿ ಅರ್ಧ ದಿನ ಚರ್ಚಿಸಿದ್ದು ಅವಿಸ್ಮರಣೀಯ. ಅವರು ಭಾರತದ ನಮ್ಮ ಲ್ಯಾಬ್‌ನಲ್ಲಿ ನಡೆಯುತ್ತಿರುವ ಲೈಸೋಸೋಮ್ ಅಧ್ಯಯನ ಬಲ್ಲವರಾಗಿದ್ದು, ಅದಕ್ಕೆ ಮೆಚ್ಚುಗೆ ಸೂಚಿಸಿದರು.

ನಾನು ಮುಂಬಯಿಗೆ ಮರಳಿ ವರ್ಷವಾಗುವಷ್ಟರಲ್ಲೇ ಡಾ. ಕುಮಟಾ ವಿಧಿವಶರಾದರು. ಡಾ. ಸಾವಂತ್ ಮಾನಸಿಕ ಕಾಯಿಲೆಗೊಳಗಾಗಿ ಕೆಲಸ ಬಿಟ್ಟಿದ್ದರು. ಹೀಗಾಗಿ ಫುಡ್ ಸಯನ್ಸ್ ಕಕ್ಷೆಯ ಮುಖ್ಯಸ್ಥನಾಗಿ ನಾನು ನಿಯುಕ್ತನಾದೆ.

ಮೀನು, ಮಾಂಸಗಳಲ್ಲಿರುವ ಲೈಸೋಸೋಮಲ್ ಕಿಣ್ವಗಳ ಕ್ರಿಯೆಯನ್ನು ನಿಯಂತ್ರಿಸಲು ನಮ್ಮ ತಂಡ ಕ್ರಿಯಾಶೀಲವಾಗಿ, ಹಲವಾರು ವೈಜ್ಞಾನಿಕ ಪ್ರಬಂಧಗಳು ದೇಶ ಹಾಗೂ ವಿದೇಶಗಳ ಜರ್ನಲ್‌ಗಳಲ್ಲಿ ಪ್ರಕಟಗೊಂಡವು.

ಪೋಸ್ಟ್ ಡಾಕ್ಟರೇಟ್ ಫೆಲೋ ಆಗಿ ಯುನಿವರ್ಸಿಟಿ ಆಫ್ ಜಾರ್ಜಿಯ(ಅಥೆನ್ಸ್) ನಲ್ಲಿ 1982–84ರ ಅವಧಿಯಲ್ಲಿ ಕೆಲಸ ಮಾಡಿದೆ. ಆಗ ನನ್ನ ಸಂಶೋಧನೆಯ ಕಾರ್ಯ, ಫಲೀಕರಣಕ್ಕೆ ಅಂಡಾಣುಗಳ ಪೊರೆಯನ್ನು ಛೇದಿಸುವ, ವೀರ್ಯಾಣುಗಳ ತುದಿಯಲ್ಲಿರುವ ಲೈಸೋಸೋಮ್‌ಗಳನ್ನು ಹೋಲುವ ಎಕ್ರೋಸೋಮ್‌ಗಳ ಕಿಣ್ವ ಸಮೂಹವನ್ನು ಕೇಂದ್ರೀಕರಿಸಿತ್ತು. ಇಬ್ಬರು ಸ್ನಾತಕರಿಗೆ ಎಂ.ಎಸ್.ಗೆ ಮಾರ್ಗದರ್ಶನ ಮಾಡಿದ್ದಲ್ಲದೆ, 'ಬಯೋಕೆಮಿಕ ಬಯೋಫಿಸಿಕ ರಿಸರ್ಚ್ ಕಮ್ಯುನಿಕೇಶನ್' ಒಳಗೊಂಡಂತೆ ನಾಲ್ಕು ವೈಜ್ಞಾನಿಕ ನಿಯತಕಾಲಿಕೆಗಳಲ್ಲಿ ನಮ್ಮ ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡವು. ಭಾರತಕ್ಕೆ ಮರಳಿದ ಬಳಿಕ ಗಾಮಾ ಕಿರಣಗಳನ್ನು ಹರಿಸಿ, ಪ್ಯಾಕ್ ಮಾಡಲಾದ ಶೀತೀಕೃತ ಮಾಂಸಜನ್ಯ ಆಹಾರ ಪದಾರ್ಥಗಳನ್ನು ಕೆಡದಂತೆ ಹೆಚ್ಚು ಕಾಲ ಕಾಪಿಡುವ ಕುರಿತಾದ ಸಂಶೋಧನೆ ಮುಂದುವರಿಸಿದೆ. 26 ವರ್ಷಗಳ ಸಂಶೋಧನಾ ಕಾರ್ಯದ ಬಳಿಕ 1991ರಲ್ಲಿ ಸ್ವಇಚ್ಛೆಯಿಂದ ಸೇವಾ ನಿವೃತ್ತಿ ಪಡೆದುಕೊಂಡೆ.

◆ **ಯಕ್ಷಗಾನ ನಿಮ್ಮ ಬಾಲ್ಯದ ದೋಸ್ತ. ನಾಟಕ ಕ್ಷೇತ್ರಕ್ಕೆ ಪ್ರವೇಶ ಹೇಗಾಯಿತು? ನಾಟಕಕಾರರಾಗಿ ಮತ್ತು ರಂಗಭೂಮಿಯಲ್ಲಿ ನೀವು ಏನನ್ನು ಕಂಡುಕೊಂಡಿರಿ?**

ಯಕ್ಷಗಾನ ಬಯಲಾಟದ ಗೀಳು ನನಗೆ ತಂದೆಯವರಿಂದ ಬಂದ ಬಳುವಳಿ. ಬಾಲ್ಯದಲ್ಲಿ ಉತ್ತಮ ನೋಡುಗರೂ, ಹವ್ಯಾಸಿ ಮದ್ದಳೆಗಾರರೂ ಆಗಿದ್ದ ನನ್ನ ತಂದೆಯವರನ್ನು ಕಂಡು ಗಜವೀಳ್ಯ ಮೆದ್ದು, ಪಟ್ಟಾಂಗ ನಡೆಸಲು ಆಗಿನ ಕಾಲದ ಯಕ್ಷ ದಿಗ್ಗಜರುಗಳಾದ ಹಾರಾಡಿ ರಾಮ ಗಾಣಿಗರು, ಹಾರಾಡಿ ನಾರಾಯಣ ಗಾಣಿಗರು, ಕುಷ್ಟಗಾಣಿಗರು, ಕಂಚಿನ ಕಂಠದ ಭಾಗವತರಾದ ಕುಂಜಾಲು ಶೇಷಗಿರಿ ಕಿಣಿಯವರು ಆಗೊಮ್ಮೆ ಈಗೊಮ್ಮೆ ನಮ್ಮ ಸಮೀಪದ ಊರಲ್ಲಿ ಆಟವಿದ್ದಾಗ ಬಂದು ನಮ್ಮ ಮನೆ ಆತಿಥ್ಯ ಸ್ವೀಕರಿಸಿ ಹೋಗುತ್ತಿದ್ದರು. ನಾನಂತೂ ಅಪ್ಪಯ್ಯನೊಂದಿಗೆ ರಾತ್ರಿ